ದಿನಾಂಕ ಃ 21-01-2020 ಓ ಎಸ್ ನಂ. 240/2013

ಪಿ. ಡಬ್ಲ್ಯೂ - 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ 1 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದ

ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳು ನನ್ನ ವಾದಪತ್ರದಲ್ಲಿ ಇಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ಈ ವಿಷಯಗಳನ್ನು ಬರೆಸದೇ ಇದ್ದರೂ ಸಹ ಬರೆಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 95/2 ಇದು ವಾಟ್ನಿ ಕಾಲಕ್ಕೆ 2 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿತ್ತು ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಿಸಿದಂತೆ ಹಕ್ಕು ದಾಖಲೆ ನಂ. 8815 ಮಂಜೂರು ಆಗಿದೆ ಎಂದರೆ ಸರಿಯಲ್ಲ. ಈ ಆಸ್ತಿಯು ರುದ್ರಪ್ಪನ ಹಿಸ್ಸೆಗೆ ಬಂದಿದ್ದರಿಂದ ಅದನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಮಯದಲ್ಲಿ ಪಹಣಿ ಪತ್ರಿಕೆಯಲ್ಲಿ 2 ನೇ ಪ್ರತಿವಾದಿಯ ಹೆಸರು ಮಾತ್ರ ದಾಖಲು ಇತ್ತು ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಾರಾಟ ಮಾಡುವ ಸಮಯದಲ್ಲಿ ಯಾವುದೇ ನ್ಯಾಯಾಲಯದಿಂದ ತಡೆಯಾಜ್ಞೆ ಇರಲಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಆಧಾರದ ಮೇರೆಗೆ 4 ನೇ ಪ್ರತಿವಾದಿಯ ಹೆಸರು ಆ ಸರ್ವೆ ನಂಬರಗೆ ದಾಖಲು ಆಗಿದೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಎಂ.ಆರ್.ನಂ 51/2016-17 ಕ್ಕೆ ದಾಖಲು ಆಗಿದೆ ಎಂದರೆ ಸರಿಯಲ್ಲ. ಆ ಹಕ್ಕು ದಾಖಲೆಯನ್ನು ನಾನು ಯಾವುದೇ ಕಂದಾಯ ಇಲಾಖೆಗಳ ನ್ಯಾಯಾಲಯದಲ್ಲಿ ಅಪೀಲು ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 95/2 ರಲ್ಲಿ ನನಗೆ ಯಾವುದೇ ಹಕ್ಕು ವಗೈರೆ ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 4 ನೇ ಪ್ರತಿವಾದಿ ಪರ ವಕೀಲರಿಂದ

4 ನೇ ಪ್ರತಿವಾದಿ ಖಾನಾಪೂರ ತಾಲೂಕಿನ ಹಿರೇಅಂಗರೊಳ್ಳಿ ಗ್ರಾಮದವರು ಎಂದರೆ ಸರಿ. 2 ಮತ್ತು 4 ನೇ ಪ್ರತಿವಾದಿ ನಡುವೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಆತನಿಗೆ ಹಿರೇಅಂಗರೊಳ್ಳಿ ಗ್ರಾಮದಲ್ಲಿ ಜಮೀನು ಮತ್ತು ಮನೆ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು



ನುಡಿಯುತ್ತಾರೆ. ಆತ ಕಂಪ್ಯೂಟರ್ ಬಿಜಿನೆಸ್ ಮಾಡುವ ವಿಷಯ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಮನೆ ನಮ್ಮ ಮನೆಯ ಎದುರಿಗೆ ಇದೆ ಎಂದರೆ ಸರಿಯಲ್ಲ. ದಿ 06.01.2017 ರಂದು 4 ನೇ ಪ್ರತಿವಾದಿ ಸರ್ವೆ ನಂ. 95/2 ನ್ನು ಖರೀದಿಸುವ ಸಮಯದಲ್ಲಿ ಅದು ಸಂಪೂರ್ಣವಾಗಿ 2 ನೇ ಪ್ರತಿವಾದಿಯ ಮಾಲ್ಕೀ ಮತ್ತು ಕಬ್ಜೆಯಲ್ಲಿ ಇತ್ತು

ಎಂದರೆ ಸರಿಯಲ್ಲ. ಸರ್ವೆ ನಂ. 95/2 ರ ಉತಾರದಲ್ಲಿ 2 ನೇ ಪ್ರತಿವಾದಿಯ ಹೆಸರು ಮಾತ್ರ ದಾಖಲು ಇತ್ತು ಎಂದರೆ ಸರಿ. 4 ನೇ ಪ್ರತಿವಾದಿಯು ಆ ಜಮೀನನ್ನು ಖರೀದಿಸುವ ಪೂರ್ವದಲ್ಲಿ ನಮ್ಮ ಊರಿನಲ್ಲಿ ಎಲ್ಲ ವಿಚಾರಣೆಯನ್ನು ಮಾಡಿ ಅದು ಯಾರ ಹೆಸರಿನಲ್ಲಿ ಮತ್ತು ಕಬ್ಜೆಯಲ್ಲಿ ಇದೆ ಎಂದು ತಿಳಿದುಕೊಂಡ ನಂತರ ಖರೀದಿಸಿದ್ದರು ಎಂದರೆ ಸರಿಯಲ್ಲ. ದಿ 06.01.2017 ರಂದು ಹಿರಿಯ ಉಪನೋಂದಣಾಧಿಕಾರಿ ಬೈಲಹೊಂಗಲದಲ್ಲಿ 8,40,000/- ರೂ. ಗೆ ನೋಂದು ಆಗಿದೆ ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ರದ್ದುಮಾಡುವಂತೆ ನನ್ನ ವಾದಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ವಿರುದ್ಧ ನನ್ನದು ಯಾವುದೇ ಮಾಗಣಿ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ಆತನ ವಿರುದ್ಧ ಯಾವುದೇ ಮಾಗಣಿ ಮಾಡದೇ ಇದ್ದರೂ ಸಹ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪತ್ರವು ಇಬ್ಬರು ಸಾಕ್ಷಿದಾರರ ಸಮಕ್ಷಮ ಸಹಿ ಆಗಿ ಕಾನೂನುಬದ್ಧವಾಗಿ ನೋಂದು ಆಗಿದೆ ಎಂದರೆ ಸರಿಯಲ್ಲ. ಖರೀದಿ ಪತ್ರ ಆದ ದಿನದಂದು 2 ನೇ ಪ್ರತಿವಾದಿಯು 4 ನೇ ಪ್ರತಿವಾದಿ ಕಡೆಯಿಂದ ರೂ. 8,40,000/- ಹಣವನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರ ಆದ ದಿನದಂದೇ ಸದರಿ ಜಮೀನಿನ ಕಬ್ಜೆ ವ ಮಾಲೀಕತ್ವವನ್ನು 4 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಿ 14.02.2017 ರಂದು ಹಕ್ಕು ದಾಖಲೆ ನಂ. 51/2016-17 ಮಂಜೂರು ಆಗಿ 4 ನೇ ಪ್ರತಿವಾದಿ ಹೆಸರು ಉತಾರದಲ್ಲಿ ಬಂದಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಸದ್ಭಾವನೆಯಿಂದ 2 ನೇ ಪ್ರತಿವಾದಿಯೇ ಮಾಲೀಕ ವ ಕಬ್ಜೆದಾರ ಇದ್ದಾನೆ ಎಂದು ಮನಗಂಡು ಖರೀದಿಸಿದ್ದಾನೆ ಎಂದರೆ ಸರಿಯಲ್ಲ. ಆತನೇ ಯಾವುದೇ ವ್ಯಕ್ತಿಗಳ ತಂಟೆ ವ ತಕರಾರು ಇಲ್ಲದಂತೆ ಕಬ್ಜೆಯಲ್ಲಿ ಇಟ್ಟುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಕಬ್ಜೆಯಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ನಾನು ಕಬ್ಜೆಯಲ್ಲಿ ಇರದೇ ಇದ್ದರೂ ಸಹ ಕಬ್ಜೆಯಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಉದ್ದೇಶಪೂರ್ವಕವಾಗಿ ಆತನನ್ನು ಈ



ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಆಸ್ತಿಯ ಮೇಲೆ ಯಾವುದೇ ಹಕ್ಕು ವಗೈರೆ ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 95/2 ರ ಮಾರುಕಟ್ಟೆ ಮೌಲ್ಯದ ಬಗ್ಗೆ ಕೋರ್ಟ ಫೀ ತುಂಬಿರುತ್ತೇನೆ. ಸರ್ವೆ ನಂ. 95/2 ಕ್ಕೆ ನಾನು ಯಾವುದೇ ಮೌಲ್ಯವನ್ನು ಮಾಡಿಲ್ಲ ಮತ್ತು ಆ ರೀತಿ ಕೋರ್ಟ ಫೀ ತುಂಬಿಲ್ಲ ಎಂದರೆ ಸರಿಯಲ್ಲ. ನಾನು 4 ನೇ ಪ್ರತಿವಾದಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ 4 ನೇ ಪ್ರತಿವಾದಿ ವಿರುದ್ಧ ಮಾಡಿದ ಎಲ್ಲ ಆಪಾದನೆಗಳು ಸುಳ್ಳು ಇವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಸರಿನಲ್ಲಿ ಆದ ಹಕ್ಕು ದಾಖಲೆಯನ್ನು ನಾನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ನಾನು ಆ ಡೈರಿಯನ್ನು ಎಲ್ಲಿಯೂ ಪ್ರಶ್ನಿಸದೇ ಇದ್ದರೂ ಸಹ ಪ್ರಶ್ನಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ